# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಲೋಕ್/ಜಿಎಲ್‌ಬಿ/3013/2017/ಎಆರ್‌ಇ-14

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು-560 001.
ದಿನಾಂಕ: 11/09/2020.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ**
**ಕಲಂ 12(1) ಅನ್ವಯ ವರದಿ**

ವಿಷಯ: ಶ್ರೀ. ಸಿದ್ದು ಸುಬೇದಾರ್, ಕೂಬಾ ಪ್ಲಾಟ್, ಕಲಬುರ್ಗಿ ರವರು
(1) ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಕಲಬುರ್ಗಿ ಮತ್ತು
(2) ಮುಖ್ಯ ಅಭಿಯಂತರರು, ಜೆಸ್ಕಾಂ, ಕಲಬುರ್ಗಿ
ರವರುಗಳ ವಿರುದ್ಧ ಸಲ್ಲಿಸಿರುವ ದೂರಿನ ಕುರಿತು.

******

ಶ್ರೀ. ಸಿದ್ದು ಸುಬೇದಾರ್, ಕೂಬಾ ಪ್ಲಾಟ್, ಕಲಬುರ್ಗಿ (ಇನ್ನು ಮುಂದು "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ (1) ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ, ಕಲಬುರ್ಗಿ ಮತ್ತು (2) ಮುಖ್ಯ ಅಭಿಯಂತರರು, ಜೆಸ್ಕಾಂ, ಕಲಬುರ್ಗಿ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ), ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:-**

ಗುಲ್ಬರ್ಗಾ ನಗರದ ಮುಖ್ಯ ರಸ್ತೆಯಲ್ಲರುವ ಸರ್ವೆ ನಂ.11 ದತ್ತಾಪುರ ಗ್ರಾಮ, ಸಿಟಿ ಸರ್ವೆ ನಂ.1016 ಷೀಟ್ ನಂ.104ರಲ್ಲಿರುವ 1855ಚ.ಮೀ. ಜಮೀನು ಆಗಿನ ಮೈಸೂರು ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿ ಹೆಸರಿನಲ್ಲಿದೆ (ಈಗ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಎಂದಾಗಿದೆ). ಆಗಿನ ಕಾರ್ಯನಿರ್ವಾಹಕ ಅಭಿಯಂತರರಾದ ಆರ್. ಕೃಷ್ಣಶೆಟ್ಟಿ ಹಾಗೂ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಮುಂಬಯಿ ಅವರೊಂದಿಗೆ ಸದರಿ ಜಮೀನಿನಲ್ಲಿ ಪೆಟ್ರೋಲ್ ಮತ್ತು ಡಿಸೇಲ್

ವಿತರಣೆಯ ಘಟಕ (ಪಂಪ್)ಸ್ಥಾಪಿಸಲು ದಿನಾಂಕ:22-02-1972 ರಂದು ಪ್ರತಿ ತಿಂಗಳು ರೂ.100/ ಭೂಬಾಡಿಗೆಯಂತೆ ಕರಾರು ಮಾಡಿಕೊಂಡಿದ್ದರು. ಪ್ರತಿ ವರ್ಷ ಕರಾರು ನವೀಕರಣ ಸೇರಿದಂತೆ ಇನ್ನಿತರ ಷರತ್ತುಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇಂಡಿಯನ್ ಆಯಿಲ್ ಕಾರ್ಪೋರೇಷನ್ ಮುಂಬಯಿ ಇವರು ಸದರಿ ಸ್ಥಳದಲ್ಲಿ ಸ್ಥಾಪಿಸಿದ್ದ ಘಟಕವನ್ನು (ಪಂಪ್‌ನ್ನು) ಮುಂದುವರೆಸಿಕೊಂಡು ಹೋಗಲು ಖಾಸಗಿ ವ್ಯಕ್ತಿಗಳಾದ ಶ್ರೀ ಜಿ.ಬಿ. ಪಾಟೀಲ್, ಶ್ರೀ ಎ.ಜಿ. ಪಾಟೀಲ್, ಶ್ರೀ ಬಿ.ಜಿ. ಪಾಟೀಲ ಮತ್ತು ಶ್ರೀ ಎಸ್.ಬಿ. ಪಾಟೀಲ ಅವರೊಂದಿಗೆ ಉಪ-ಗುತ್ತಿಗೆಯನ್ನು ದಿನಾಂಕ:18-07-1977ರಂದು ಕರಾರು ಒಪ್ಪಂದ ಮಾಡಿಕೊಂಡಿದ್ದು ಈ ವಿಷಯವನ್ನು ಆಗಿನ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಇದು ನಿಯಮ ಬಾಹಿರ ಮತ್ತು ಮೂಲ ಒಪ್ಪಂದವನ್ನು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಉಲ್ಲಂಘಿಸಿದಂತಾಗಿದೆ.

ಮುಂದುವರೆದು, ಭೂದಾಖಲೆಗಳ ಉಪನಿರ್ದೇಶಕರು ಗುಲ್ಬರ್ಗಾ ಇವರ ಆದೇಶ ಸಂಖ್ಯೆ:ಸಿಟಿಎಸ್/ಅಪೀಲ್/12/92-93 ದಿನಾಂಕ:05-03-1992ರಲ್ಲಿ ಸ್ಪಷ್ಟವಾಗಿ ದಾಖಲಿಸಿದ್ದು, ಸದರಿ ಅವರ ಮೇಲ್ಮನವಿಯಲ್ಲಿ ಭೂ ಬಾಡಿಗೆದಾರರ ಕಾಲಂನಲ್ಲಿ ಇಂಡಿಯನ್ ಆಯಿಲ್ ಪೆಟ್ರೋಲ್ ಎಂದು ನಮೂದಿಸಿದ್ದು, ಇರುತ್ತದೆ ಆದ್ದರಿಂದ ಅರ್ಜಿದಾರರು ಸ್ಥಳೀಯ ಮುನ್ಸಿಪಾಲಿಟಿಗೆ ಸದರಿ ಸರ್ವೆ ನಂಬರ್ ಜಮೀನಿಗೆ ಆಸ್ತಿ ತೆರಿಗೆ ಹಾಗೂ ಸಂಬಂಧಿಸಿದ ಎಲ್ಲಾ ತೆರಿಗೆ ಪಾವತಿಸಿರುವ ದಾಖಲೆಗಳನ್ನು ಸಲ್ಲಿಸಿದ್ದರಿಂದ ಭೂ ಬಾಡಿಗೆದಾರರ ಕಾಲಂನಲ್ಲಿ ಶ್ರೀ ಜಿ.ಬಿ. ಪಾಟೀಲ್, ಶ್ರೀ ಎ.ಜಿ. ಪಾಟೀಲ್, ಶ್ರೀ ಬಿ.ಜಿ. ಪಾಟೀಲ ಮತ್ತು ಶ್ರೀ ಎಸ್.ಬಿ. ಪಾಟೀಲ ನಮೂದಿಸಿ ಆದೇಶ ಹೊರಡಿಸಿದ್ದಾರೆ. ಸರ್ಕಾರದ ಹೆಸರಿನಲ್ಲಿದ್ದ ಜಮೀನಿಗೆ ಖಾಸಗಿ ಅವರು ಕರ ಪಾವತಿಸಿದ್ದು ಇದು ಭೂ ಕಳ್ಳತನಕ್ಕೆ ಯತ್ನಿಸಿದ್ದಾರೆಂದು ಸಾಬೀತಾಗುತ್ತದೆ. ಭೂ ಬಾಡಿಗೆ ಒಪ್ಪಂದವಾಗಿರುವುದು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಮತ್ತು ಜಮೀನಿನ ಮಾಲೀಕತ್ವವಿರುವ ಆಗಿನ ಮೈಸೂರು ವಿದ್ಯುತ್‌ಚ್ಛಕ್ತಿ ಮಂಡಳಿ ಗುಲ್ಬರ್ಗಾ (ಮರುನಾಮಕರಣದ ನಂತರ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಯೇ ಮಾಲೀಕರು) ಇವರೊಂದಿಗೆ, ಅಂದರೆ ಜಮೀನಿನ ಮಾಲೀಕರನ್ನು ವಂಚಿಸಿದ್ದಾರೆಂದು ನಮ್ಮ ಸ್ಪಷ್ಟ ಆರೋಪ. ಈ ಕುರಿತು ದಿ:14-03-2016ರಂದು ಈಗಿನ ಜಮೀನಿನ ಮಾಲೀಕರಾದ ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ

ವಿದ್ಯುತ್ ಸರಬರಾಜು ಕಂಪನಿ, ಗುಲ್ಬರ್ಗಾ ಇವರಿಗೆ ದೂರು ಸಲ್ಲಿಸಿ ಸದರಿ ಸ್ಥಳವನ್ನು ಅತಿಕ್ರಮಣದಿಂದ ತೆರವುಗೊಳಿಸಬೇಕೆಂದು ಮನವಿ ಮಾಡಲಾಗಿತ್ತು. ನಾವು ದಿ:14-03-2016 ರಂದು ಸಲ್ಲಿಸಿದ ದೂರಿಗೆ ದಿನಾಂಕ:07-06-2016ರಂದು ಮುಖ್ಯ ಅಭಿಯಂತರರು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಗುಲ್ಬರ್ಗಾ ಅವರು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಮುಂಬಯಿ ಇವರಿಗೆ ಪತ್ರ ಬರೆದು "44ವರ್ಷಗಳಿಂದ ಭೂ ಬಾಡಿಗೆ ಪಾವತಿಸದೆ ಕರಾರು ಉಲ್ಲಂಘಿಸಿದ್ದೀರಿ ಎಂದು ಮಾಹಿತಿ ನೀಡಿದ್ದಲ್ಲದೆ, ತಕ್ಷಣವೇ ಜಮೀನು ತೆರವುಗೊಳಿಸುವಂತೆ ಸೂಚಿಸಿದ್ದಾರೆ". ಇಂಡಿಯನ್ ಆಯಿಲ್ ಕಾರ್ಪೋರೇಷನ್ ಮುಂಬಯಿ ಇವರು ಪ್ರಕರಣವನ್ನು ಬಳ್ಳಾರಿ ವಿಭಾಗೀಯ ಕಚೇರಿಗೆ ವರ್ಗಾಯಿಸಿದ್ದು, ದಿನಾಂಕ:15-07-2016 ರಂದು ಬಳ್ಳಾರಿ ವಿಭಾಗೀಯ ಕಚೇರಿಯ ವ್ಯವಸ್ಥಾಪಕರು ಪತ್ರ ಬರೆದು ಭೂ ಬಾಡಿಗೆ ಒಪ್ಪಂದ ಕರಾರು ನವೀಕರಣ ಮಾಡಿಕೊಳ್ಳುವಲ್ಲಿ ನಿರ್ಲಕ್ಷ್ಯವಾಗಿದೆ, ಆದರೆ ಭೂ ಬಾಡಿಗೆಯನ್ನು ನಿಯಮಿತವಾಗಿ ಪ್ರತಿ ತಿಂಗಳು ಪಾವತಿಸಲಾಗಿದೆ ಎಂದು ತಿಳಿಸಿದ್ದಾರೆ.

ಮುಂದುವರೆದು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯಿಂದ ದಿನಾಂಕ:07-03-2017 ಮತ್ತು ದಿನಾಂಕ:06-09-2017ರಂದು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಬೆಂಗಳೂರು ಇವರಿಂದ ಅನುಕ್ರಮವಾಗಿ ಸದರಿ ಜಮೀನಿನ ಭೂ ಬಾಡಿಗೆ ಸ್ವೀಕೃತಿ ಮತ್ತು ಭೂ ಬಾಡಿಗೆ ಪಾವತಿ ಕುರಿತು ಮಾಹಿತಿ ಹಕ್ಕು ಕಾಯ್ದೆ ಅಡಿ ದಾಖಲೆಗಳನ್ನು ಪಡೆಯಲಾಗಿದೆ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯವರು ದಿ:29-11-2003 ರಿಂದ 27-10-2016ರವರೆಗಿನ ಸ್ವೀಕೃತಿ ಕುರಿತು ಮತ್ತು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಇವರು ಏಪ್ರಿಲ್ 2013ರಿಂದ ಮಾರ್ಚ 2017ರವರೆಗಿನ ಪಾವತಿ ಕುರಿತು ಮಾಹಿತಿ ನೀಡಿದ್ದಾರೆ. ಇಂಡಿಯನ್ ಆಯಿಲ್ ಕಾರ್ಪೋರೇಷನ್ ಅವರು ನೀಡಿರುವ ಏಪ್ರಿಲ್ 2013 ರಿಂದ ಮಾರ್ಚ 2017ರವರೆಗಿನ ಮಾಹಿತಿಯನ್ನು ಪರಿಶೀಲಿಸಿದಾಗ ಬಳ್ಳಾರಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಕಚೇರಿಯಿಂದ ರೂ.100/-ಡಿಡಿ ಮೂಲಕ ಪಾವತಿಸಿರುವುದಾಗಿ ಮಾಹಿತಿ ನೀಡಿದ್ದಾರೆ. ಈ ದಾಖಲೆಗಳಲ್ಲಿ ಕಂಡು ಬಂದ ಆಶ್ಚರ್ಯವೆಂದರೆ ಡಿಡಿ ದಿನಾಂಕಕ್ಕೂ ಮುಂಚಿತವಾಗಿ ಅಂದರೆ ಎರಡು ದಿವಸ, ನಾಲ್ಕು ದಿವಸ ಇನ್ನೂ ಕೆಲ ತಿಂಗಳು ಏಳು

ದಿವಸಗಳ ಮುಂಚಿತವಾಗಿ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಖಾತೆಗೆ ಜಮಾ ಆಗಿರುವುದು ಕಂಡು ಬಂದಿದೆ. ಈ ಕುರಿತು ದಿ:12-09-2017ರಂದು ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಗುಲ್ಬರ್ಗಾ ಇವರಿಗೆ ದೂರನ್ನು ಸಲ್ಲಿಸಲಾಗಿದ್ದು ಇನ್ನೂವರೆಗೂ ಕ್ರಮಕೈಗೊಂಡಿರುವುದಿಲ್ಲ. ದಿ:21-08-2017ರಂದು ವ್ಯವಸ್ಥಾಪಕ ನಿರ್ದೇಶಕರು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಗುಲ್ಬರ್ಗಾ ಇವರಿಗೆ ಪತ್ರ ಬರೆದು ಈಗಿನ ಸರ್ಕಾರಿ ಮಾರುಕಟ್ಟೆ ದರದಂತೆ ಪ್ರತಿ ವರ್ಷ ರೂ.4.50ಲಕ್ಷವಾಗುತ್ತದೆ. ಕಳೆದ 44ವರ್ಷಗಳಿಂದ ರೂ.100/- ಪಾವತಿಸದೆ ಜಮೀನು ಬಳಕೆ ಮಾಡುತ್ತಿರುವವರ ವಿರುದ್ಧ ಮತ್ತು ಕ್ರಮಕೈಗೊಳ್ಳದೇ ಇರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಲಾಗಿತ್ತು. ದಿನಾಂಕ:28-03-2017 ರಂದು ಮುಖ್ಯ ಅಭಿಯಂತರರು ವಿದ್ಯುತ್ ಮತ್ತು ಕಾರ್ಪೋರೇಟ್ ಯೋಜನೆಗಳು ಇವರಿಗೆ ಪತ್ರ ಬರೆದು Karnataka Public Premises (Eviction of Unauthorized Occupants) Act 1974 ಅಡಿ ಕ್ರಮಕೈಗೊಳ್ಳುವಂತೆಯೂ ಕೂಡ ಆಗ್ರಹಿಸಲಾಗಿತ್ತು. ಆದರೆ ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಹೀಗಾಗಿ ಈ ಸಂಸ್ಥೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿರುತ್ತಾರೆ.

ದೂರಿನೊಂದಿಗೆ ಸಂಬಂಧಪಟ್ಟ ದಾಖಲಾತಿಗಳ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

ಈ ಮೇಲ್ಕಂಡ ದೂರಿನ ಬಾಬ್ತು ಒಂದನೇ ಎದುರುದಾರರಾದ ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ, ಕಲ್ಬುರ್ಗಿ ರವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಅದರಲ್ಲಿ ದದ್ದಾಪುರ ಗ್ರಾಮದ ಸರ್ವೆ ನಂ.11ರಲ್ಲಿ ಗುವಿಸಕಂನಿ ಸ್ವಾಧೀನದಲ್ಲಿರುವ 2ಎಕರೆ ಜಾಗದ ಪೈಕಿ 1855ಚ.ಅಡಿ ಜಾಗವನ್ನು ಗುವಿಸಕಂನಿ ಲೀಸ್ ಆಧಾರದ ಮೇರೆಗೆ ಭಾರತ ಸರ್ಕಾರೀ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ 1972ರಲ್ಲಿ ಆಗಿನ ಮೈಸೂರು ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿಯಿಂದ ನೀಡಲಾಗಿರುತ್ತದೆ. ಈ ಸಂಬಂಧ ಎರಡು ಸರ್ಕಾರೀ ಸ್ವಾಮ್ಯದ ಸಂಸ್ಥೆಗಳ ಮಧ್ಯ ಕರಾರು ಮಾಡಿಕೊಳ್ಳಲಾಗಿದೆ. ನಂತರದ ದಿನಗಳಲ್ಲಿ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಮೂಲ ಕರಾರಿನ ಪ್ರಕಾರ ಪುಟ ಸಂಖ್ಯೆ:4ರಲ್ಲಿನ ನಿಬಂಧನೆಗೆ ಅನುಗುಣವಾಗಿ ದಿ:18-07-1977 ರಂದು ಉಪಗುತ್ತಿಗೆಯನ್ನು ಮೆ:ಪ್ರೀಮಿಯರ್ ಎಜೆನ್ಸೀಸ್, ಗುಲ್ಬರ್ಗಾ ಸಂಸ್ಥೆಯ ಪಾಲುದಾರರಾದ ಶ್ರೀ

ಜಿ.ಬಿ. ಪಾಟೀಲ್, ಶ್ರೀ ಎ.ಜಿ. ಪಾಟೀಲ್, ಶ್ರೀ ಬಿ.ಜೆ. ಪಾಟೀಲ್ ಮತ್ತು ಶ್ರೀ ಎಸ್.ಬಿ. ಪಾಟೀಲ್ ಇವರೊಂದಿಗೆ ಮಾಡಿಕೊಂಡಿರುತ್ತಾರೆ. ಇದನ್ನು ಮೂಲ ಮಾಲೀಕರಾಗಿದ್ದ ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿಗೆ ತಿಳಿಸಿರುವುದಿಲ್ಲ. ಈ ಉಪಕರಾರಿಗೂ ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿಗೂ ಹಾಗು ಪ್ರಸ್ತುತ ಗುವಿಸಕಂನಿಗೂ ಯಾವುದೇ ಸಂಬಂಧವಿರುವುದಿಲ್ಲ.

ಭೂ ದಾಖಲೆಗಳ ಉಪ ನಿರ್ದೇಶಕರು ಗುಲ್ಬರ್ಗಾರವರು ಉಪಗುತ್ತಿಗೆದಾರರ ಹೆಸರುಗಳನ್ನು ತಮ್ಮ ಆದೇಶ ಪತ್ರ ಸಂಖ್ಯೆ:ಸಿಟಿಎಸ್/ಅಪೀಲ್/12/92-93 ದಿನಾಂಕ:05.03.1992 ಪ್ರಕಾರ ಆಸ್ತಿ ಪ್ರಕಟಣೆ ಪತ್ರದಲ್ಲಿ ಭೂಬಾಡಿಗೆದಾರರ ಕಲಂನಲ್ಲಿ ದಾಖಲಿಸಿದ್ದಾರೆ. ಮೂಲ ಮಾಲಿಕತ್ವ ಪಹಣಿ ಪ್ರಕಾರ ಎಂದು ದಾಖಲಿಸಿರುತ್ತಾರೆ. ಪಹಣಿ ಪ್ರಕಾರ ಮೂಲ ಮಾಲಿಕತ್ವಕ್ಕೆ ಯಾವುದೇ ದಕ್ಕೆಯಾಗಿರುವುದಿಲ್ಲ. ಈ ವಿಷಯವನ್ನು ಕಂದಾಯ ಇಲಾಖೆಯವರು ಅಂದಿನ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಗಮನಕ್ಕೆ ತಂದಿರುವುದಿಲ್ಲ. ಮೂಲ ಕರಾರಿನ ಪ್ರಕಾರ ಭೂಬಾಡಿಗೆದಾರರು IOCL ಆಗಿದ್ದು IOCL ಹೆಸರನ್ನು ಭೂಬಾಡಿಗೆದಾರು ಕಲಂನಲ್ಲಿ ದಾಖಲಿಸಿ ದುರಸ್ತಿ ಮಾಡಿಕೊಡಬೇಕೆಂದು ಭೂದಾಖಲೆಗಳ ಉಪ ನಿರ್ದೇಶಕರು ಗುಲ್ಬರ್ಗಾ ಇವರಿಗೆ ಈ ಕಚೇರಿಯ ದಿನಾಂಕ: 22-11-2017 ರಲ್ಲಿ ಮನವಿ ಮಾಡಿರುತ್ತದೆ. ಅಲ್ಲದೆ ಈ ಸಂಬಂಧ ಮೇಲ್ಮನವಿ ಪ್ರಾಧಿಕಾರದ ಭೂದಾಖಲೆಗಳ ಜಂಟಿ ನಿರ್ದೇಶಕರು, ನಗರ ಮಾಪನಾ, ಉತ್ತರ ವಲಯ, ಬೆಳಗಾವಿ ಇವರಿಗೆ ದಿ:24-11-2017 ರಂದು ಪತ್ರ ಬರೆದು ಅಗತ್ಯ ತಿದ್ದುಪಡಿಗಳನ್ನು ಆಸ್ತಿ ಪತ್ರಗಳಲ್ಲಿ ಮಾಡಿಕೊಡಬೇಕೆಂದು ಕೋರಲಾಗಿದೆ. ದೂರುದಾರರು ತಿಳಿಸಿರುವ ಪ್ರಕಾರ ಇಲ್ಲಿ ಯಾವ ಭೂಗಳ್ಳತನವಾಗಿರದೆ ಈ ಭೂಮಿಯ ಮಾಲಿಕತ್ವ ಗುವಿಸಕಂ ಹೆಸರಿನಲ್ಲಿರುತ್ತದೆ.

ಮುಂದುವರೆದು, IOCL ರವರು ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿಯೊಂದಿಗೆ ಮಾಡಿಕೊಂಡ ಮೂಲ ಕರಾರಿನ ಪ್ರಕಾರ ಭೂಬಾಡಿಗೆ ಕರಾರನ್ನು ಕಾಲಕಾಲಕ್ಕೆ ನವೀಕರಿಸದೆ ಮೂಲ ಭೂಬಾಡಿಗೆ ದರ ಮಾಹೆಯಾನ ರೂ.100/-ಮಾತ್ರ ಪಾವತಿಸುತ್ತಿದ್ದ ಕಾರಣ ಇದು ಕರಾರಿನ ಒಪ್ಪಂದದ ಉಲ್ಲಂಘನೆಯಾಗಿರುತ್ತದೆ ಎಂದು ಒಪ್ಪಂದದಂತೆ IOCL ರವರು ನಡೆದುಕೊಳ್ಳದ ಕಾರಣ ಸದರಿ ಜಾಗವನ್ನು ತೆರವುಗೊಳಿಸುವಂತೆ ದಿ:8-7-2016ರಂದು IOCL ರವರ ಬಳ್ಳಾರಿ ಕಚೇರಿಗೆ

ಪತ್ರಿಸಿಲಾಗಿದೆ. ಸದರಿ ಪತ್ರಕ್ಕೆ ಅವರು ಉತ್ತರಿಸಿ ಭೂಬಾಡಿಗೆ ಕರಾರನ್ನು ನವೀಕರಿಸಿಕೊಳ್ಳಲು ಪ್ರಯತ್ನಿಸಿದ್ದು, ಅನುಸರಣೆ ಕೊರತೆಯ ಕಾರಣ ನವೀಕರಿಸಿಕೊಳ್ಳಲಾಗಿಲ್ಲ ಮತ್ತು ಭೂಬಾಡಿಗೆ ದರವನ್ನು ನಿಯಮಾನುಸಾರ ಹೆಚ್ಚಿಸಿಕೊಂಡು ಭೂಬಾಡಿಗೆ ಕರಾರಿನ ಒಪ್ಪಂದ ನವೀಕರಣಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಿರುತ್ತಾರೆ. IOCL ರವರ ಮನವಿಯನ್ನು ಗುವಿಸಕಂನಿ ಪುರಸ್ಕರಿಸಿ ನಿಯಮಾನುಸಾರ ಭೂಬಾಡಿಗೆದರವನ್ನು ಮಾಹೆಯಾನ ರೂ.28,686/-ನಿಗಧಿಪಡಿಸಿ ಹಿಂದಿನ ಬಾಕಿ ವಸೂಲಿ ಹಕ್ಕನ್ನು ಕಾಯ್ದಿರಿಸಿ ಹೊಸ ಕರಾರುಪತ್ರವನ್ನು ಮಾಡಿಕೊಳ್ಳುವಂತೆ ದಿ:21-03-2017ರಲ್ಲಿ ಆದೇಶ ಪತ್ರ ನೀಡಲಾಗಿದೆ. ಹೊಸ ಕರಾರು ಪತ್ರ ಮಾಡಿಕೊಳ್ಳಲು IOCL ಮ್ಯಾನೇಜ್‌ಮೆಂಟ್ ಒಪ್ಪಿಗೆ ಪಡೆದುಕೊಳ್ಳಲು ಸಮಯಾವಕಾಶ ಕೋರಿದೆ.

ಮುಂದುವರೆದು, ಮೂಲ ಒಪ್ಪಂದದ ಪ್ರಕಾರ ಕಾಲಕಾಲಕ್ಕೆ ಭೂಬಾಡಿಗೆ ಪರಿಷ್ಕರಣೆ ಆಗದಿರುವ ಕಾರಣ ಆಗಿರುವ ನಷ್ಟವನ್ನು ಭರಿಸಿಕೊಳ್ಳಲು ಹಿಂದಿನ ಬಾಕಿ ಲೆಕ್ಕ ಹಾಕಲು ದಿ:22-09-2017 ರಂದು ಸಂಬಂಧಪಟ್ಟ ಉಪನೋಂದಣಾಧಿಕಾರಿಗಳಿಗೆ ಪತ್ರಿಸಿ 1973 ರಿಂದ 2015 ರವರೆಗಿನ ಸದರಿ ಜಾಗದ ಮಾರುಕಟ್ಟೆ ಮೌಲ್ಯವನ್ನು ನೀಡಲು ಕೋರಲಾಗಿತ್ತು. ಸದರಿಯವರು ದಿ:9-10-2017 ರಂದು ಸದರಿ ಜಾಗದ ಮಾರುಕಟ್ಟೆ ಮೌಲ್ಯವನ್ನು ನೀಡಿರುತ್ತಾರೆ. ಅದರಂತೆ 1973 ರಿಂದ 2017 ರವರೆಗೆ ಲೆಕ್ಕ ಹಾಕಲಾಗಿ ಹಿಂದಿನ ಬಾಕಿ ರೂ.22,79,306/-ಆಗಿರುತ್ತದೆ. ಅದನ್ನು 15ದಿನಗಳೊಳಗೆ ಪಾವತಿಸಬೇಕೆಂದು IOCL, ಬಳ್ಳಾರಿ ಇವರಿಗೆ ದಿ:20-11-2017 ರಂದು ಪತ್ರಿಸಿಲಾಗಿದೆ. IOCL ರವರು ಮೂಲ ಕರಾರು ದಿನಾಂಕದಿಂದ ಪ್ರತಿತಿಂಗಳು ಹಳೆಯ ದರದಲ್ಲಿ ಭೂಬಾಡಿಗೆಯನ್ನು ಭರಿಸುತ್ತಾ ಬಂದಿರುತ್ತಾರೆ. ಈ ಬಗ್ಗೆ 2013 ಏಪ್ರಿಲ್ ತಿಂಗಳಿನಿಂದ ಮಾರ್ಚ್ 2017ರವರೆಗಿನ ಮಾಹಿತಿಯನ್ನು ಗುವಿಸಕಂನಿ, ಗುಲ್ಬರ್ಗಾ ವಿಭಾಗ-1, ಲೆಕ್ಕ ಶಾಖೆಯಿಂದ ಪಡೆಯಲಾಗಿದೆ, ಎಂದು ತಿಳಿಸಿ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

ಎರಡನೇ ಎದುರುದಾರರಾದ ಮುಖ್ಯ ಇಂಜಿನಿಯರ್(ವಿದ್ಯುತ್), ನಿಗಮ ಕಾರ್ಯಾಲಯ, ಗುವಿಸಕಂನಿ, ಕಲ್ಬುರ್ಗಿ ರವರು ಸಹಾ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ಒಂದನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಯನ್ನೇ ಅಳವಡಿಸಿಕೊಂಡಿರುತ್ತಾರೆ.

ದೂರುದಾರರು ಮತ್ತು ಎದುರುದಾರರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಆಗಿರುವಂತಹ ಎರಡು ಗುತ್ತಿಗೆಪತ್ರಗಳು ಸಹಾ ನೋಂದಾಯಿತವಲ್ಲದ ಗುತ್ತಿಗೆ ಪತ್ರಗಳಾಗಿವೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ **IOCL** ರವರು ದಿ:18-07-1977 ರಂದು ಉಪಗುತ್ತಿಗೆಯನ್ನು ಮೆ:ಪ್ರೀಮಿಯರ್ ಎಜೆನ್ಸೀಸ್, ಗುಲ್ಬರ್ಗಾ ಸಂಸ್ಥೆಯ ಪಾಲುದಾರರಾದ ಶ್ರೀ ಜಿ.ಬಿ. ಪಾಟೀಲ್, ಶ್ರೀ ಎ.ಜಿ. ಪಾಟೀಲ್, ಶ್ರೀ ಬಿ.ಜೆ. ಪಾಟೀಲ್ ಮತ್ತು ಶ್ರೀ ಎಸ್.ಬಿ. ಪಾಟೀಲ್ ಇವರೊಂದಿಗೆ ಮಾಡಿಕೊಂಡಿರುತ್ತಾರೆ. ಇದನ್ನು ಮೂಲ ಮಾಲೀಕರಾಗಿದ್ದ ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿಗೆ ತಿಳಿಸಿರುವುದಿಲ್ಲ ಎಂದು ಒಪ್ಪಿರುತ್ತಾರೆ. ಅಲ್ಲದೇ **IOCL** ರವರು ರಾಜ್ಯ ವಿದ್ಯುತ್‌ಚ್ಛಕ್ತಿ ಮಂಡಳಿಯೊಂದಿಗೆ ಮಾಡಿಕೊಂಡ ಮೂಲ ಕರಾರಿನ ಪ್ರಕಾರ ಭೂಬಾಡಿಗೆ ಕರಾರನ್ನು ಕಾಲಕಾಲಕ್ಕೆ ನವೀಕರಿಸದೇ ಮೂಲ ಬಾಡಿಗೆದರ ಮಾಹೆಯಾನ ರೂ.100/-ಮಾತ್ರ ಪಾವತಿಸುತ್ತಿದ್ದ ಕಾರಣ ಇದು ಕರಾರಿನ ಒಪ್ಪಂದದ ಉಲ್ಲಂಘನೆಯಾಗಿರುತ್ತದೆ ಎಂದು ಒಪ್ಪಂದದಂತೆ **IOCL** ರವರು ನಡೆದುಕೊಳ್ಳದ ಕಾರಣ ಸದರಿ ಜಾಗವನ್ನು ತೆರವುಗೊಳಿಸುವಂತೆ ದಿ:8-7-2016ರಂದು **IOCL** ರವರ ಬಳ್ಳಾರಿ ಕಚೇರಿಗೆ ಪತ್ರಿಸಿಲಾಗಿದೆ ಎನ್ನುವುದನ್ನೂ ಸಹಾ ಒಪ್ಪಿರುತ್ತಾರೆ. ಪ್ರಸ್ತುತ ದೂರನ್ನು ದೂರುದಾರರು ಈ ಸಂಸ್ಥೆಗೆ ದಿ:9-10-2017ರಂದು ಸಲ್ಲಿಸಿರುತ್ತಾರೆ. ದೂರಿನಲ್ಲಿ ಈ ಎದುರುದಾರರಿಗೆ ಪತ್ರಿಸಿ ಕಳೆದ 44ವರ್ಷಗಳಿಂದ ರೂ.100/-ನ್ನು ಪಾವತಿಸದೆ ಜಮೀನು ಬಳಕೆ ಮಾಡುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಲು ಆಗ್ರಹಿಸಲಾಗಿದ್ದರೂ ಸಹಾ ಎದುರುದಾರರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಎನ್ನುವುದನ್ನೂ ಸಹಾ ಸ್ಪಷ್ಟಪಡಿಸಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ ದೂರುದಾರರು ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ನಂತರದಲ್ಲಿ ಗುವಿಸಂಕನಿ ರವರು ದಿ:8-7-2016ರಂದು ಕರಾರಿನ ಒಪ್ಪಂದದ ಉಲ್ಲಂಘನೆಯಾಗಿರುವುದರಿಂದ ಜಾಗವನ್ನು ತೆರವುಗೊಳಿಸುವಂತೆ ಪತ್ರಿಸಿರುತ್ತಾರೆ. ನಂತರದಲ್ಲಿ ಭೂದಾಖಲೆಗಳ ಜಂಟಿ ನಿರ್ದೇಶಕರ ಮುಂದೆ ದಾಖಲಾತಿಗಳಲ್ಲಿ **IOCL** ಹೆಸರನ್ನು ಭೂಬಾಡಿಗೆದಾರರ ಕಲಂನಲ್ಲಿ ದಾಖಲಿಸಿ ದುರಸ್ಥಿ ಮಾಡಿಕೊಡಬೇಕೆಂದು ಕೇಳಿರುತ್ತಾರೆ. ಇವೆಲ್ಲವನ್ನೂ ಪ್ರಸ್ತುತ ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ನಂತರದಲ್ಲಿ ಕೈಗೊಂಡ ಕ್ರಮಗಳಾಗಿವೆ. ಅಲ್ಲದೇ **IOCL** ಹೊಸ ಕರಾರು ಒಪ್ಪಂದ ಮಾಡಿಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೇ ಹಿಂದಿನ ಬಾಕಿ ಹಣವನ್ನು ಗುವಿಸಂಕನಿಗೆ ಪಾವತಿ ಮಾಡಿರುವ ಬಗ್ಗೆಯೂ ಸಹಾ ದಾಖಲಾತಿಯನ್ನು

**ಹಾಜರುಪಡಿಸಿರುವುದಿಲ್ಲ. ಕೇವಲ ಏಪ್ರಿಲ್ 2013 ರಿಂದ ಮಾರ್ಚ 2017ರವರೆಗೆ ಮಾಹೆಯಾನ 100/- ರೂ. ಬಾಡಿಗೆಯನ್ನು ಪಾವತಿ ಮಾಡಿರುತ್ತಾರೆ ಎಂದು ದಾಖಲಾತಿಯನ್ನು ಹಾಜರುಪಡಿಸಿರುತ್ತಾರೆ.**

ಈ ಪ್ರಕರಣದ ಆರಂಭ 44ವರ್ಷಗಳ ಹಿಂದಿನದ್ದಾಗಿದೆ. ಪ್ರಸ್ತುತ ದೂರನ್ನು ದಿ:9-10-2017 ರಂದು ಈ ಸಂಸ್ಥೆಗೆ ಸಲ್ಲಿಸಲಾಗಿದೆ. ಕಲಂ.8(2)(ಡಿ) ಲೋಕಾಯುಕ್ತ ಕಾಯ್ದೆ 1984 ಈ ರೀತಿ ಹೇಳುತ್ತದೆ: “Matters not subject to investigation:- The Lokayukta or an Upa-lokayukta shall not investigate:- any complaint involving an allegation made after the expiry of five years from the date on which the action complained against is alleged to have taken place.”

**ಒಂದು ಮತ್ತು ಎರಡನೇ ಎದುರುದಾರರು ಆಗಿರುವಂತಹ ಲೋಪಗಳನ್ನು ಮೇಲೆ ತಿಳಿಸಿರುವಂತೆ ತಮ್ಮ ಆಕ್ಷೇಪಣೆಯಲ್ಲಿ ಒಪ್ಪಿರುತ್ತಾರೆ. ಅಲ್ಲದೇ ಅವರು ತಮ್ಮ ಮತ್ತು IOCL ನಡುವೆ ಆದಂತಹ ಗುತ್ತಿಗೆ ಕರಾರು ಮತ್ತು IOCL ಹಾಗೂ ಮೆ: ಪ್ರೀಮಿಯರ್ ಏಜೆನ್ಸೀಸ್, ಗುಲ್ಬರ್ಗ ರವರ ನಡುವೆ ಆಗಿದ್ದಂತಹ ಉಪಗುತ್ತಿಗೆಯ ನೋಂದಾಯಿತವಲ್ಲದ ಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಈ ಪ್ರಸ್ತುತ ದೂರನ್ನು ಈ ಸಂಸ್ಥೆಗೆ ದೂರುದಾರರು ಸಲ್ಲಿಸಿದ ನಂತರ 1ನೇ ಎದುರುದಾರರು IOCL ರವರಿಗೆ ಒಪ್ಪಂದದಂತೆ ನಡೆದುಕೊಳ್ಳದ ಕಾರಣ ಸದರಿ ಜಾಗವನ್ನು ತೆರವುಗೊಳಿಸುವಂತೆ ದಿ: 08.7.2016 ರಂದು ಪತ್ರಿಸಲಾಗಿದೆ ಮತ್ತು 1973 ರಿಂದ 2017 ರವರೆಗೆ ಸದರಿ ಮಾರುಕಟ್ಟೆ ಮೌಲ್ಯ ರೂ.22,79,306/- ನ್ನು 15 ದಿನಗಳೊಳಗೆ ಪಾವತಿಸಬೇಕೆಂದು IOCL, ಬಳ್ಳಾರಿ ರವರಿಗೆ ದಿನಾಂಕ: 20/11/2017 ರಂದು ಪತ್ರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಅಲ್ಲದೇ ಹಿಂದಿನ ಬಾಕಿ ವಸೂಲಿ ಹಕ್ಕನ್ನು ಕಾಯ್ದಿರಿಸಿ ಹೊಸ ಕರಾರು ಪತ್ರವನ್ನು ಮಾಡಿಕೊಳ್ಳುವಂತೆ ದಿ: 21.03.2017 ರಂದು ಆದೇಶ ನೀಡಲಾಗಿದೆ ಮತ್ತು ಈ ಬಗ್ಗೆ IOCL ಮ್ಯಾನೇಜ್‌ಮೆಂಟ್ ಒಪ್ಪಿಗೆ ಪಡೆದುಕೊಳ್ಳಲು ಕೋರಿದೆ ಎಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.**

ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ:-

i. ಮೇಲ್ಕಂಡ ಕಾರಣಗಳಿಗಾಗಿ 1ನೇ ಎದುರುದಾರರು ಈಗಾಗಲೇ ಒಪ್ಪಿಕೊಂಡಿರುವಂತೆ ಹಾಗೂ ಉಪನೋಂದಣಾಧಿಕಾರಿಗಳಿಂದ ಲೆಕ್ಕ ಹಾಕಿ 1973 ರಿಂದ 2017ರವರೆಗೆ ಸದರಿ ಜಾಗದ ಮಾರುಕಟ್ಟೆಯ ಹಿಂದಿನ ಬಾಕಿ 22,79,306/- ಎಂದು ತಿಳಿಸಿರುವುದರಿಂದ ಅದನ್ನು 8 ವಾರಗಳೊಳಗೆ ವಾರ್ಷಿಕ 12% ಬಡ್ಡಿಯೊಂದಿಗೆ ವಸೂಲಿ ಮಾಡಿ ಈ ಸಂಸ್ಥೆಗೆ ವರದಿಯನ್ನು ನೀಡತಕ್ಕದ್ದು, ಇಲ್ಲವಾದಲ್ಲಿ ಎದುರುದಾರರು ಅಂದರೆ ಜೆಸ್ಕಾಂ, ಗುಲ್ಬರ್ಗ ಮಾಡಿಕೊಂಡಿರುವ ಗುತ್ತಿಗೆಯನ್ನು ರದ್ದುಪಡಿಸಬಹುದಾಗಿರುತ್ತದೆ.

ii. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಜೆಸ್ಕಾಂ, ಗುಲ್ಬರ್ಗ, IOCL ದೊಂದಿಗೆ ಮಾಡಿಕೊಂಡಂತಹ ಹೊಸ ಕರಾರುಪತ್ರವನ್ನು ಈ ಸಂಸ್ಥೆಯ ಅವಲೋಕನಕ್ಕಾಗಿ ಹಾಜರುಪಡಿಸಬೇಕಾಗಿರುತ್ತದೆ.

ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

P. Vishwanatha Shetty 11/9/2020

(ನ್ಯಾಯಮೂರ್ತಿ ಪಿ. ವಿಶ್ವನಾಥಶೆಟ್ಟಿ)
ಲೋಕಾಯುಕ್ತರು,
ಕರ್ನಾಟಕ ರಾಜ್ಯ.